ಆದರೆ, ಸೋಫಿಯ ಗ್ರಹಚಾರ ನೆಟ್ಟಗಿರಲಿಲ್ಲ. ದ್ವಾರದ ಬಳಿ ನಿಂತಿದ್ದ ಸೆಕ್ಯುರಿಟಿಯ ಹದ್ದಿನ ಕಣ್ಣುಗಳಿಗೆ ಅವನ ಹಳೆಯ ಶರಟು, ಪಾಲಿಶ್ ಕಾಣದ ಶೂಗಳು ಕಾಣದಿರಲು ಸಾಧ್ಯವಿರಲಿಲ್ಲ. ಸೆಕ್ಯುರಿಟಿಯ ಮುಖ ಹೊಲಸನ್ನು ಕಂಡಂತೆ ಗಂಟಿಕ್ಕಿಕೊಂಡಿತು. ಅವನ ಕಣ್ಸನ್ನೆಗೇ ಕಾಯುತ್ತಿದ್ದ ಇಬ್ಬರು ಧಡಿಯರು ಗೋಡೆಯೊಳಗಿಂದೆಂಬಂತೆ ಹೊರಬಂದರು. ಒಬ್ಬ ಸೋಫಿಯ ಕಂಕಳುಗಳೊಳಗೆ ಕೈ ಹಾಕಿದರೆ ಮತ್ತೊಬ್ಬ ಅವನ ಎರಡೂ ಕಾಲುಗಳನ್ನು ಬಾಚಿಕೊಂಡು ಕೊಂಚ ಹೊತ್ತು ಉಯ್ಯಾಲೆಯಂತೆ ತೂಗಿಸುತ್ತಾ ಬೀದಿಗೆ ಎಸೆದರು! ಹೀಗೆ, ಸೋಫಿ ಎಣಿಸಿದಂತೆ ಅಲ್ಲಿ ಪೊಲೀಸರ ಆಗಮನವಾಗಲೇ ಇಲ್ಲ.

ಯಾಕೋ ಅದೃಷ್ಟ ಸರಿ ಇಲ್ಲ ಎಂದುಕೊಂಡು ಸೋಫಿ ಮೇಲೆ ಎದ್ದು ಮೈಮೇಲಿನ ದೂಳನ್ನು ಕೊಡವಿಕೊಂಡ. ಏನೂ ನಡೆದೇ ಇಲ್ಲವೆಂಬಂತೆ ಮುಂದಕ್ಕೆ ನಡೆಯತೊಡಗಿದ. ಹೀಗೆ ನಡೆಯುತ್ತಾ ಸೋಫಿ ಆರನೇ ಅವೆನ್ಯೂ ತಲುಪಿದ. ಕ್ರಿಸ್ಮಸ್‌ಗೆಂದು ಅಲಂಕಾರಗೊಂಡಿದ್ದ ಝಗಮಗಿಸುತ್ತಿದ್ದ ಒಂದು ಅಂಗಡಿಯ ಮುಂದೆ ಅವನು ನಿಂತಿದ್ದ. ದಪ್ಪ ಗಾಜಿನ ಪರದೆಯ ಹಿಂದೆ ಬೆಲೆಬಾಳುವ ವಸ್ತುಗಳನ್ನು ಕಲಾತ್ಮಕವಾಗಿ ಜೋಡಿಸಿಟ್ಟಿದ್ದರು. ಬಹಳ ಹೊತ್ತು ನೋಡುತ್ತಾ ನಿಂತಿದ್ದು ಏನನ್ನೋ ಎತ್ತಿಕೊಳ್ಳುವಂತೆ ನೆಲಕ್ಕೆ ಬಾಗಿದ. ಒಂದು ಕಲ್ಲನ್ನು ಎತ್ತಿಕೊಂಡು ಅಂಗಡಿಯ ಗಾಜಿನ ಪರದೆಗೆ ಗುರಿ ಇಟ್ಟು ಜೋರಾಗಿ ಬೀಸಿದ... 'ಫಳ್ಳ್...' ಎಂಬ ಶಬ್ದದೊಂದಿಗೆ ಗಾಜಿನ ಗೋಡೆ ಒಡೆದು ಚೂರುಚೂರಾಯಿತು. ನಾಲ್ಕೂ ದಿಕ್ಕಿನಿಂದ ಜನರು ಓಡೋಡಿ ಬಂದು ಅಂಗಡಿಯ ಮುಂದೆ ಜಮಾಯಿಸತೊಡಗಿದರು. ಸೈರನ್ ಸದ್ದು ಮಾಡುತ್ತಾ ಪೊಲೀಸರೂ ಬಂದರು. ಸೋಫಿಗೆ ಖುಷಿಯಾಯಿತು. ಅವನ ರೊಟ್ಟಿ ತುಪ್ಪದೊಳಗೆ ಜಾರಿ ಬೀಳುವುದರಲ್ಲಿತ್ತು!

"ಯಾವನಯ್ಯಾ ಅವನು ಅಂಗಡಿಗೆ ಕಲ್ಲು ಹೊಡೆದವನು?..." ಪೊಲೀಸ್ ಅಧಿಕಾರಿ ವಿಚಾರಿಸಿದಾಗ ಸೋಫಿಯ ಅದೃಷ್ಟದ ಬಾಗಿಲು ತೆರೆದಂತಾಯಿತು. ಅವನು ಮುಂದೆ ಬಂದು,

"ಕಲ್ಲು ಹೊಡೆದವನು ನಾನೇ ಎಂದರೆ ನಂಬುತ್ತೀರಾ ಸರ್?" ಎಂದ ವ್ಯಂಗ್ಯದಿಂದೆಂಬಂತೆ.

